ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ ಹಾಗೂ ಶ್ರೀಮತಿ ಡಿ.ಜಿ. ಹೇಮಾವತಿ ಇವರುಗಳು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳು 191ರ ಮೇರೆಗೆ ವಿಧಾನ ಸಭೆಯಲ್ಲಿ ದಿನಾಂಕ : 28-8-1997 ರಂದು ಪ್ರಸ್ತಾವನೆ ಸಲ್ಲಿಸಿ ದಿನಾಂಕ 3-9-97ರ ಲಂಕೇಶ್ ಪತ್ರಿಕೆಯ ಪುಟ 4,5,12 ಹಾಗೂ 13 ಇವುಗಳಲ್ಲಿ ವಿಧಾನ ಮಂಡಲದ ಮಹಿಳಾ ಶಾಸಕರುಗಳಿಗೆ ಅವಹೇಳನ ಮಾಡುವ ಪ್ರಕಟಣೆಗಳನ್ನು ಮುದ್ರಿಸಿರುತ್ತಾರೆಂದು ಆಪಾದಿಸಿ ತನ್ಮೂಲಕ ತಮ್ಮ ಹಕ್ಕುಚ್ಯುತಿಯಾಗಿದೆಯೆಂದು ಹಾಗೂ ಈ ವಿಷಯವನ್ನು ಸದನದಲ್ಲಿ ತರಬೇಕೆಂದು ಪ್ರಸ್ತಾಪಿಸಿರುತ್ತಾರೆ. ಇದಕ್ಕನುಗುಣವಾಗಿ ದಿನಾಂಕ 28-9-97ರಂದು ಈ ವಿಚಾರವನ್ನು ಸದನದಲ್ಲಿ ಮಂಡಿಸಿದ ನಂತರ ಸದನದ ಅಭಿಪ್ರಾಯದಂತೆ ಲಂಕೇಶ್ ಪತ್ರಿಕೆಯ ಸಂಪಾದಕರಿಗೆ ಮತ್ತು ಈ ವರದಿಯನ್ನು ಬರೆದಂತಹ ವರದಿಗಾರನಿಗೆ ನಿಯಮಾನುಸಾರ ಒಂದು ನೋಟೀಸನ್ನು ಕೊಟ್ಟು ದಿನಾಂಕ : 6-9-97ರ ಒಳಗಾಗಿ ಅವರ ಉತ್ತರ ನೀಡಬೇಕೆಂದು ಸೂಚಿಸಲಾಗಿದ್ದಿತು.

ದಿನಾಂಕ : 6-9-1997 ರಂದು ರವಾನಿಸಿರುವ ಅವರ ಸಮಜಾಯಿಷಿ ಪತ್ರದಲ್ಲಿ ಈ ಆಪಾದನೆಗಳನ್ನು ಪತ್ರಿಕೆಯ ಸಂಪಾದಕರು, ವರದಿಗಾರರು ಅಲ್ಲಗಳೆದಿದ್ದಾರೆ ಮತ್ತು ಈ ಲೇಖನವನ್ನು ಯಾರ ಮೇಲೂ ಪೂರ್ವಗ್ರಹವಿಲ್ಲದೆ ಸದಭಿಪ್ರಾಯದಿಂದ ಸಿದ್ಧಪಡಿಸಿದ್ದೇವೆಂದು ತಿಳಿಸಿರುತ್ತಾರೆ. ನಿಖರ ಆರೋಪಗಳಿಲ್ಲದ ಕಾರಣ ಸಂಪಾದಕರ ಅಭಿಪ್ರಾಯವನ್ನು ಗಮನಕ್ಕೆ ತೆಗೆದುಕೊಂಡು ಈ ವಿಷಯವನ್ನು ಇಲ್ಲಿಗೆ ಕೈಬಿಡಲಾಗಿದೆ.

7.00 ಪಿ.ಎಂ.

ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಅಧ್ಯಕ್ಷರು : ಹತ್ತನೇ ವಿಧಾನಸಭೆಯ ಏಳನೇ ಅಧಿವೇಶನವು ದಿನಾಂಕ 9-3-98ರಿಂದ ದಿನಾಂಕ 27-3-98ರವರೆಗೆ ನಡೆಸಿದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಸಭೆಯಮುಂದೆ ಮಂಡಿಸುತ್ತೇನೆ.

ಸೋಮವಾರ ದಿನಾಂಕ 9ನೇ ಮಾರ್ಚ್ 1998ರಂದು ಪ್ರಾರಂಭವಾದ ಏಳನೇ ಅಧಿವೇಶನವು 15 ದಿನಗಳು ಹಾಗೂ 64 ಗಂಟೆ 58 ನಿಮಿಷಗಳ ಕಾಲ ಕಾರ್ಯಕಲಾಪಗಳನ್ನು ನಡೆಸಿರುತ್ತದೆ.

ದಿನಾಂಕ 9ನೇ ಮಾರ್ಚ್ 1998ರಂದು ಜಂಟಿ ಸದನವನ್ನುದ್ದೇಶಿಸಿ ಮಾತನಾಡಿದ ರಾಜ್ಯಪಾಲರ ಭಾಷಣದ ನಂತರ ಉಪಚುನಾವಣೆಯಲ್ಲಿ ಚುನಾಯಿತರಾದ ಮೂವರು ನೂತನ ಸದಸ್ಯರು ಪ್ರಮಾಣವಚನ ಸ್ವೀಕರಿಸಿದರು. ನಂತರ ಇತ್ತೀಚೆಗೆ ನಿಧನರಾದ 6 ಗಣ್ಯರುಗಳ ಗೌರವಾರ್ಥ ಸಂತಾಪ ಸೂಚನಾ ನಿರ್ಣಯವನ್ನು ಅಂಗೀಕರಿಸಲಾಯಿತು.

ದಿನಾಂಕ 17ನೇ ಮಾರ್ಚ್ 1998ರಂದು ರಾಜ್ಯಪಾಲರ ಭಾಷಣದ ಮೇಲಿನ ಪ್ರಸ್ತಾವಕ್ಕೆ ಸರ್ಕಾರದಿಂದ ಉತ್ತರ ನೀಡಲಾಯಿತು ಹಾಗೂ ವಂದನಾ ನಿರ್ಣಯವನ್ನು ಅಂಗೀಕರಿಸಲಾಯಿತು.

ಈ ಅವಧಿಯಲ್ಲಿ ಒಟ್ಟು 918 ಪ್ರಶ್ನೆಗಳನ್ನು ಸ್ವೀಕರಿಸಿದ್ದು, 144 ಪ್ರಶ್ನೆಗಳನ್ನು ಚುಕ್ಕೆ ಗುರ್ತಿನ ಪ್ರಶ್ನೆಗಳನ್ನಾಗಿ ಮತ್ತು 651 ಪ್ರಶ್ನೆಗಳನ್ನು ಚುಕ್ಕೆ ರಹಿತ ಪ್ರಶ್ನೆಗಳನ್ನಾಗಿ ಅಂಗೀಕರಿಸಲಾಗಿರುತ್ತದೆ.

ಶೂನ್ಯ ವೇಳೆಯಲ್ಲಿ ಮಾನ್ಯ ಸದಸ್ಯರುಗಳವರು 90 ವಿಷಯಗಳ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

13 ಅಲ್ಪಕಾಲಾವಧಿ ಸೂಚನೆಗಳನ್ನು ಸ್ವೀಕರಿಸಲಾಗಿದ್ದು ಅದರಲ್ಲಿ 3 ಸೂಚನೆಗಳಿಗೆ ಉತ್ತರವನ್ನು ನೀಡಲಾಯಿತು.

65 ಗಮನ ಸೆಳೆಯುವ ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳ ಪೈಕಿ 25 ಸೂಚನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಹೇಳಿಕೆಯನ್ನು ನೀಡಿರುತ್ತಾರೆ.

ವಿಧಾನ ಮಂಡಲ ಸಮಿತಿಗಳ 13ವರದಿಗಳನ್ನು ಸದನದಲ್ಲಿ ಮಂಡಿಸಲಾಯಿತು. ಈ ಅಧಿವೇಶನದಲ್ಲಿ ಒಟ್ಟು 228 ಕಾಗದ ಪತ್ರಗಳನ್ನು ಮಂಡಿಸಲಾಯಿತು. ಸರ್ಕಾರಿ ಶಾಸನಾತ್ಮಕ ನಿರ್ಣಯವನ್ನು ದಿನಾಂಕ 20.3.98ರಂದು ಮಂಡಿಸಲ್ಪಟ್ಟು ದಿನಾಂಕ 27-3-98ರಂದು ಅಂಗೀಕರಿಸಲ್ಪಟ್ಟಿರುತ್ತದೆ.

ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಇಬ್ಬರು ಸದಸ್ಯರನ್ನು ಚುನಾಯಿಸುವ ಬಗ್ಗೆ ಪ್ರಸ್ತಾವವನ್ನು ದಿನಾಂಕ 11-3-98ರಂದು ಹಾಗೂ ದಿನಾಂಕ 16-3-98ರಂದು ವಿಧಾನಮಂಡಲದ ವಿವಿಧ ಸಮಿತಿಗಳಿಗೆ ಸದಸ್ಯರುಗಳನ್ನು ಚುನಾಯಿಸಲು ಪ್ರಸ್ತಾವವನ್ನು ಸದನದಲ್ಲಿ ಮಂಡಿಸಲಾಯಿತು.

ದಿನಾಂಕ18-3-98ರಂದು ಉಪ ಮುಖ್ಯಮಂತ್ರಿಯವರು1998-99ನೇ ಸಾಲಿನ ಆಯವ್ಯಯವನ್ನು ಸದನದಲ್ಲಿ ಮಂಡಿಸಿದರು. ದಿನಾಂಕ 24-3-98ರಂದು 1997-98ನೇ ಸಾಲಿನ ಪೂರಕ ಅಂದಾಜುಗಳ (ಅಂತಿಮ ಕಂತು)ನ್ನು ಉಪಮುಖ್ಯಮಂತ್ರಿಯವರು ಸದನದಲ್ಲಿ ಮಂಡಿಸಿದರು. ಆಯವ್ಯಯದ ಮೇಲಿನ ಚರ್ಚೆಗೆ ಹಾಗೂ ಪೂರಕ ಅಂದಾಜುಗಳ ಮೇಲಿನ ಚರ್ಚೆಗೆ ದಿನಾಂಕ 26-3-98ರಂದು ಉಪ ಮುಖ್ಯಮಂತ್ರಿಯವರು ಉತ್ತರ ನೀಡಿದರು ಹಾಗೂ ಬೇಡಿಕೆಗಳ ಪ್ರಸ್ತಾವಗಳನ್ನು ಸಭೆಯ ಮತಕ್ಕೆ ಹಾಕಿ ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ನಿಯಮ 60ರ ಮೇರೆಗೆ ನಿಲುವಳಿ ಸೂಚನೆಗಳ ಒಟ್ಟು 10 ಪ್ರಸ್ತಾವನೆಗಳನ್ನು ಸ್ವೀಕರಿಸಿದ್ದು ಯಾವುದೇ ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಲಿಲ್ಲ.

ದಿನಾಂಕ 27-3-98ರಂದು ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳು, ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಾವಳಿಯಲ್ಲಿರುವ ವಿಷಯ ಸಮಿತಿಗಳಿಗೆ ಸಂಬಂಧಿಸಿದ ಸಮಿತಿಗಳನ್ನು ರದ್ದುಪಡಿಸಿದ ಹಾಗೂ ವಿಧಾನ ಮಂಡಲದ ವಿವಿಧ ಸಮಿತಿಗಳ ಸದಸ್ಯರುಗಳ ಸಂಖ್ಯೆಯನ್ನು ಹೆಚ್ಚಿಸುವ ಬಗೆಗಿನ ಪ್ರಸ್ತಾವವನ್ನು ಮಂಡಿಸಿದರು ಹಾಗೂ ಪ್ರಸ್ತಾವನೆಗಳಿಗೆ ಸಭೆಯ ಅನುಮೋದನೆಯನ್ನು ನೀಡಿದೆ.

ಈ ಅವಧಿಯಲ್ಲಿ ಒಟ್ಟು 10 ವಿಧೇಯಕಗಳನ್ನು ಸದನದಲ್ಲಿ ಮಂಡಿಸಲಾಯಿತು. ಅವುಗಳಲ್ಲಿ 8 ವಿಧೇಯಕಗಳನ್ನು ಪ್ರಯ್ಯಾಲೋಚಿಸಿ ಅಂಗೀಕರಿಸಲಾಯಿತು.

ಈ ರೂಲಿಂಗ್ ಕೊಡುವ ವೇಳೆಗ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಸಣ್ಣ ಸೂಚನೆಯನ್ನು ನನಗೆ ಕೊಟ್ಟರು. ಅದೇನೆಂದರೆ ಸದನದ ಅಭಿಪ್ರಾಯವನ್ನು ಪಡೆದು ಈ ವಿಚಾರದಲ್ಲಿ

ಪ್ರತ್ಯೇಕವಾಗಿ ಅವರಿಗೆ ನೋಟೀಸ್ ಕೊಡಲಾಗಿತ್ತು. ಭಾಷೆ ಬಗ್ಗೆ ಒಂದು ಮಾತನ್ನು ಹೇಳಿದ್ದರೆ ಚೆನ್ನಾಗಿ ಇರುತ್ತಿತ್ತು ಎಂದು. ಯಾರು ಬಳಸತಕ್ಕಂಥ ಭಾಷೆ ಅವರ ಯೋಗ್ಯತೆಯನ್ನು ತೋರಿಸುತ್ತದೆ. ಪತ್ರಿಕಾ ಸ್ವಾತಂತ್ರ್ಯ ಇರತಕ್ಕಂಥ ಈ ಸಮಾಜದಲ್ಲಿ ಅವರು ಇಚ್ಛೆ ಪಡತಕ್ಕಂಥ ಭಾಷೆಯನ್ನು ಬಳಸಬಹುದು. ಅವರು ಬಳಸತಕ್ಕಂಥ ಭಾಷೆಯಿಂದ ನಾವು ವಿಚಲಿತರಾಗಬೇಕಾಗಿಲ್ಲ. ಅದಕ್ಕೆ ಬುದ್ಧಿಯನ್ನು ಸಮಾಜವೇ ಕಾಲದಿಂದ ಕಾಲಕ್ಕೆ ಹೇಳುತ್ತದೆ ಎನ್ನತಕ್ಕಂಥ ಮಾತನ್ನು ಮಾತ್ರ ಹೇಳಿ ಅದನ್ನು ಅಲ್ಲಿಗೆ ಮುಕ್ತಾಯ ಮಾಡುತ್ತಿದ್ದೇನೆ.

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ಸುಲಲಿತವಾಗಿ ನಡೆಸಲು ನನ್ನೊಡನೆ ಸಹಕರಿಸಿದ ಈ ಸದನದ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳಿಗೂ, ವಿರೋಧ ಪಕ್ಷದ ನಾಯಕರಿಗೂ, ವಿಧಾನ ಸಭೆಯ ಎಲ್ಲ ಮಾನ್ಯ ಸದಸ್ಯರಿಗೂ, ಪತ್ರಕರ್ತರಿಗೂ, ಆಕಾಶವಾಣಿ ಮತ್ತು ದೂರದರ್ಶನದವರಿಗೂ ವಿವಿಧ ಇಲಾಖಾ ಅಧಿಕಾರಿಗಳು ಹಾಗೂ ವಿಧಾನ ಮಂಡಲದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ನೀವು ಶುಭಾಷಯಗಳನ್ನು ಹೇಳುವುದಕ್ಕಿಂತ ಮುಂಚಿತವಾಗಿ ನಾನು ಕೊನೆಗೆ ಒಂದೇ ನಿಮಿಷದಲ್ಲಿ ಹೇಳುತ್ತೇನೆ.

ಅಧ್ಯಕ್ಷರು : ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ಈ ಸಲ ತಾವು ಬಹಳ ಚೆನ್ನಾಗಿ ಸದನವನ್ನು ನಡೆಸಿದ್ದೀರಿ. ಹದಿನಾರು ದಿವಸಗಳಲ್ಲಿ ಬಹುಶಃ ಅನೇಕ ವಿಷಯಗಳನ್ನು ಈ ಸದನದಲ್ಲಿ ನಾವು ಪ್ರಸ್ತಾಪ ಮಾಡಿದ್ದೇವೆ. ಅದಕ್ಕೆ ಸಾಕಷ್ಟು ಅವಕಾಶವನ್ನು ಕೂಡ ತಾವು ಮಾಡಿಕೊಟ್ಟಿದ್ದೀರಿ. ಸರ್ಕಾರ ಕೂಡ ಕೆಲವು ವಿಷಯದಲ್ಲಿ ಸಮಾಧಾನಕರವಾಗಿ ಉತ್ತರವನ್ನು ಕೊಟ್ಟರು. ಕೆಲವು ವಿಷಯಗಳಲ್ಲಿ ಅವರದ್ದೇ ಆದ ನಿಲುವನ್ನು ತೆಗೆದುಕೊಂಡಿದ್ದಾರೆ. ಮತ್ತು ವಿಶೇಷವಾಗಿ ಈ ಒಂದು ಅವಧಿಯನ್ನು ಏನು ಇತ್ತು ಎಂದರೆ ಸರ್ಕಾರ ಬೀಳುತ್ತದೆ ಬೀಳುತ್ತದೆ ಎಂದು ಒಂದು ಇತ್ತು. ಈ ಬ್ಯಾಲೆನ್ಸಿಂಗ್ ಡಾಲ್ ಇರುತ್ತದಲ್ಲಾ, ಹಾಗೆ ಏನಾಗಿದೆ ಎಂದರೆ ಪಟೇಲರ ಸರ್ಕಾರ ಅಲುಗಾಡುತ್ತಿದೆ. ಆದರೆ ಬೀಳುವುದಿಲ್ಲ. ಹಾಗೆ ಇದು ಆಗಿಬಿಟ್ಟಿದೆ. ಬ್ಯಾಲೆನ್ಸ್ ಡಾಲ್ ಇದ್ದಹಾಗೆ ಈ ಕಡೆ ಆ ಕಡೆ ಹೋಗುತ್ತಿದೆ. ಆದರೆ ಸಂಪೂರ್ಣವಾಗಿ ಬೀಳುವುದಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಕೂಡ ನಮ್ಮ ಸದನ ಬಹಳ ಒಳ್ಳೆಯ ರೀತಿಯಿಂದ ನಡೆದುಕೊಂಡು ಬಂದಿತು...

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿ) : ಈಗ ವಾಲ್‌ಕ್ಲಾಕ್ ಇರುತ್ತದಲ್ಲಾ, ಅದು ಹೀಗೆ ಹೀಗೆ ಅಂತಿರುತ್ತದಲ್ಲಾ, ಹಾಗೆ ಅಂದರೆ ಆ ಗಡಿಯಾರ ನಡೆಯುತ್ತಿದೆ ಎಂದು ಅರ್ಥ. ಬೀಳುತ್ತದೆ ಎಂದು ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಅವರು ಗಡಿಯಾರ ನಡೆಯುತ್ತಿದೆ ಎಂದು ಹೇಳಿ ಕೊಳ್ಳಲಿ. ಅವರ ಗಡಿಯಾರ ನಡೆಯಲಿ. ಆದರೆ ಆ ಒಂದು ಗೊಂಬೆ

ಇರುತ್ತದಲ್ಲಾ, ಅದು ಮಾತ್ರ ಅಲುಗಾಡಿಕೊಂಡೇ ಇರುತ್ತದೆ. ಅದು ಒಂದೇ ಕಡೆ ನಿಲ್ಲುವುದಿಲ್ಲ. ಅದೇನೇ ಇರಲಿ, ಬೀಳುವುದಿಲ್ಲ ಎಂದು ನಾನೇ ಹೇಳಿದೆ. ಈ ಒಂದು ಪರಿಸ್ಥಿತಿಯಲ್ಲಿ ಅವರು ಇದ್ದಾರೆ. ಇಷ್ಟಾದರೂ ಕೂಡ...

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಅಧ್ಯಕ್ಷರೇ, ನಮ್ಮೂರಿನಲ್ಲಿ ಗಡಿಯಾರ ರಿಪೇರಿ ಮಾಡುವ ಒಂದು ಅಂಗಡಿ ಇದೆ. ಮಧ್ಯಾಹ್ನ ಒಂದು ಗಂಟೆಗೆ ಅದು ಸಾಯಂಕಾಲ 8 ಗಂಟೆಯನ್ನು ತೋರಿಸುತ್ತದೆ. ಆದರೂ ಅದು ಅಲ್ಲಾಡುತ್ತಲೇ ಇರುತ್ತದೆ. ಸುಮ್ಮನೆ ಹೆಸರಿಗೆ ಮಾತ್ರ ಗಡಿಯಾರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಂಥೆಂಥ ಗಡಿಯಾರಗಳು ಶಿವಮೊಗ್ಗದಲ್ಲಿವೆ ಎಂಬುದು ನಮಗೆ ಗೊತ್ತಿಲ್ಲ. ಹೇಳುವವರೂ ಅಲ್ಲಿಯವರೇ, ಕೇಳುವವರೂ ಅಲ್ಲಿಯವರೇ. ಇದು ನಮ್ಮ ಗ್ರಹಾಚಾರ. ಅದೇನೇ ಇರಲಿ. ಬಹಳ ಒಳ್ಳೆಯ ರೀತಿಯಿಂದ ತಾವು ಸದನವನ್ನು ನಡೆಸಿದ್ದೀರಿ. ಮತ್ತು ಬಹಳ ಲವಲವಿಕೆಯಿಂದ ನಾವು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಆಯಿತು. ಅದಕ್ಕೆ ಸುಲಲಿತವಾಗಿ ಸದನದ ಕಾರ್ಯಕಲಾಪಗಳನ್ನು ನಡೆಸಿಕೊಟ್ಟಿದ್ದಕ್ಕಾಗಿ ತಮಗೂ ಕೂಡ ನಾನು ಅಭಿನಂದಿಸುತ್ತೇನೆ. ಮತ್ತು ಕರ್ನಾಟಕ ರಾಜ್ಯದ ಜನತೆಗೂ ಕೂಡ ಈ ಸಂದರ್ಭದಲ್ಲಿ ಶುಭಾಶಯ ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್(ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ಪ್ರಾಯಶಃ ಇಡೀ ದೇಶದಲ್ಲಿ ಎಲ್ಲಾ ಶಾಸನಸಭೆಗಳ ಬಗ್ಗೆ ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಒಂದು ವಿಶ್ವಾಸ ಇಲ್ಲದೇ ಇರುವಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಅದರಲ್ಲೂ ವಿಶೇಷವಾಗಿ ಈ ಸರಳಿಯಲ್ಲಿ ಈ ರಾಜ್ಯದಲ್ಲೂ ನೋಡಿದಾದ ಯಾವ ಸ್ಥಿತಿ ಇದೆಯೆಂದು ನೋಡಿದ್ದೇವೆ. ಆದರೂ ಕೂಡ ನಮ್ಮ ರಾಜ್ಯದಲ್ಲಿ ಈ ಸಲ ವಿಧಾನಸಭೆಯಲ್ಲಿ ನಾವು ತಮಗೆ ಮಾತು ಕೊಟ್ಟಹಾಗೆ ಯಾವುದೇ ಧರಣಿ ಮಾಡದೇನೆ, ಪ್ರೊಸಿಡಿಂಗ್ಸ್‌ಗೆ ಅಡ್ಡ ಹಾಕದೇನೆ ಒಂದು ರೀತಿಯಲ್ಲಿ ಒಳ್ಳೆಯ ಮಟ್ಟದಲ್ಲಿ ಇಲ್ಲಿ ನಮ್ಮ ಪ್ರೊಸೀಡಿಂಗ್ಸ್ ನಡೆದಿದೆ. ಈ ಸಂದರ್ಭದಲ್ಲಿ ತಾವು ನಮ್ಮ ಬೇಡಿಕೆಗಳನ್ನು, ಆಗ್ರಹಗಳನ್ನು ಅನೇಕಬಾರಿ ನೀವು ಒಪ್ಪಿಕೊಳ್ಳದಿದ್ದರೂ, ರಾಜ್ಯದ ಜನತೆಗೆ ನಮ್ಮದು ಯಾವುದೇ ಧೋರಣೆಯಿಂದ ಬೇಸರವಾಗಬಾರದು ಎನ್ನುವ ಒಂದೇ ಕಾರಣದಿಂದ ನಮ್ಮ ಮಟ್ಟಿಗೆ ನಾವೂ ಕೂಡ ಈ ಅಧಿವೇಶನದ ಕಾರ್ಯಕಲಾಪಗಳಲ್ಲಿ ಪಾಲ್ಗೊಂಡಿದ್ದೇವೆ. ಈ ಸಂದರ್ಭದಲ್ಲಿ ಈ ಅಧಿವೇಶನ ಇವತ್ತು ಕೊನೆಗೊಳ್ಳುವ ಈ ಗಳಿಗೆಯಲ್ಲಿ ತಮ್ಮ ಜೊತೆ ಇಡೀ ರಾಜ್ಯದ ಜನತೆಗೆ ಶುಭಾಶಯಗಳನ್ನು ಕೋರುತ್ತಾ ನಮ್ಮ ರಾಜ್ಯ ವಿಧಾನಸಭೆ ಬೇರೆ ವಿಧಾನಸಭೆಗಳಿಗೆ ಮಾರ್ಗದರ್ಶನವಾಗುವ ರೀತಿಯಲ್ಲಿ ಮುಂಬರುವ ದಿವಸಗಳಲ್ಲಿ ನಾವು ಕೆಲಸ ಮಾಡೋಣ. ನಾನು ಆವತ್ತು ಹೇಳಿದಹಾಗೆ ನಾವು ಪರಸ್ಪರ ಫೈಟ್ ಮಾಡುವುದರ ಬದಲು ಎಲ್ಲಾ ಸೇರಿಕೊಂಡು ಪ್ರಾಬ್ಲಮ್ ವಿರುದ್ಧ ಫೈಟ್ ಮಾಡೋಣ. ಅದಕ್ಕೆ ತಮ್ಮ ಮಾರ್ಗದರ್ಶನ ದೊರೆಯಬೇಕೆಂದು ಕೇಳಿ ನಾನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ನಾಡಿದ್ದರಿಂದ ಕಹಿ ಮತ್ತು ಸಿಹಿ ಎರಡನ್ನೂ ನಾವು ಸಮಾನವಾಗಿ ತೆಗೆದುಕೊಂಡು ಹೋಗತಕ್ಕಂಥ ಹೊಸ ವರ್ಷ ಆರಂಭವಾಗುತ್ತಿದೆ.

ಈ ಸಂದರ್ಭದಲ್ಲಿ ನಾನು ಅಧ್ಯಕ್ಷರು ಬರುವಾಗಲೆಲ್ಲಾ ಪ್ರತಿ ದಿವಸ ಕೇಳುತ್ತೇನೆ, ನೀವು ಹೇಗೆ, ಸರಿಯಾಗಿ ಮನಸ್ಸಿನಲ್ಲಿ ಇದ್ದೀರಾ ಎಂದು. ಬೇಜಾರು ಮಾಡಿಕೊಂಡು ಸಭೆಗೆ ಬರುತ್ತಾರೋ ಎಂದು ಕೇಳುತ್ತೇನೆ. ಏಕೆಂದರೆ ಇಲ್ಲಿ ನಿಮ್ಮ ಮುಖ ನೋಡಿಕೊಂಡು ನಾವು ಮಾತನಾಡುತ್ತೇವೆ. ನೀವು ಸ್ವಲ್ಪ ಹೆಚ್ಚುಕಡಿಮೆಯಾದರೆ ನಾವು ಮಾತನಾಡುವುದಕ್ಕೆ ಹೋಗುವುದಿಲ್ಲ. ಏನೋ ಕೋಪತಾಪದಲ್ಲಿ ಇರುತ್ತೀರಿ, ಮನಸ್ಸಿನಲ್ಲಿ ನೋವು ಇಟ್ಟುಕೊಂಡಿರುತ್ತೀರಿ. ಆದರೆ ನಿಮ್ಮ ಮನಸ್ಸಿನಲ್ಲಿ ನೀವು ಯಾರಬಗ್ಗೆಯೂ ಏನೂ ಇಟ್ಟುಕೊಂಡಿರುವುದಿಲ್ಲ. ಆದ್ದರಿಂದ ನೀವು ಯಾವಾಗಲೂ ಅಧ್ಯಕ್ಷರಾಗಿ ಈ ಪೀಠದಲ್ಲಿ ಇರಬೇಕು ಎನ್ನತಕ್ಕಂಥಾದ್ದು ನಮ್ಮ....

ಅಧ್ಯಕ್ಷರು : ಸಾಕಪ್ಪ ಸಾಕು.

ಶ್ರೀ ಕೆ.ಎಸ್. ಈಶ್ವರಪ್ಪ : ಇಲ್ಲೇ ವಿರೋಧ ಮಾಡುವಂಥ ಸ್ಥಿತಿ ಬರುತ್ತದೆ ನಮಗೆ. ಇನ್ನೂ ಏನೇನೂ ಮಂತ್ರಿ, ಮುಖ್ಯಮಂತ್ರಿಯಾಗುವ ಆಸೆ ಇರಬೇಕಾದರೆ ನೀವು ಸದಾ ಅಲ್ಲೇ ಇರಬೇಕು ಎನ್ನುವುದು ಯಾವ ನ್ಯಾಯ ?

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ನನ್ನ ಉದ್ದೇಶ ಏನೆಂದರೆ ಈ ಪೀಠದಿಂದ ತಾವು ಕೆಳಗೆ ಇಳಿಯಬಾರದು ಎಂಬುದು. ಆ ಉದ್ದೇಶ ಹೊರತು ಬೇರೆ ಏನೂ ಅಲ್ಲ. ಮಾನ್ಯ ಮುಖ್ಯಮಂತ್ರಿಗಳ ವಿಚಾರದಲ್ಲಿ ನನಗೇನು ಅನಿಸುತ್ತದೆಂದರೆ, ಅವರ ಒಳ್ಳೆಯ ತನದಿಂದಲೇ, ಅವರ ಹತ್ತಿರಕ್ಕೆ ಯಾರೂ ಬರುತ್ತಾ ಇಲ್ಲ. ಅವರನ್ನು ಕೆಳಕ್ಕೆ ಇಳಿಸಬೇಕೆಂದು ಬಹಳ ಪ್ರಯತ್ನಗಳು ನಡೆಯುತ್ತಾ ಇವೆ. ಅದೇನೆಂದು ಸ್ವಲ್ಪ ಹೇಳಬೇಕು. ಮತ್ತು ಅವರು ಇತ್ತೀಚಿನ ದಿನಗಳಲ್ಲಿ ದೇವಸ್ಥಾನಗಳಿಗೆ ಹೋಗುತ್ತಿದ್ದಾರೆ. ಅದು ಯಾವ ದೇವರು, ಯಾವ ಶಕ್ತಿ ಎಂಬುದನ್ನು ಹೇಳಿದರೆ, ನಾವೂ ಸ್ವಲ್ಪ ಅದರ ಅನುಭವವನ್ನು ಪಡೆಯಬಹುದು.

ಶ್ರೀ ಜೆ.ಹೆಚ್. ಪಟೇಲ್ : ಇದೇ ದೇವಸ್ಥಾನ, ಇದೇ ದೇವರು.

ಶ್ರೀ ವಾಟಾಳ್ ನಾಗರಾಜ್ : ನನಗೆ ಬಹಳ ಖುಷಿಯಾಯಿತು. ನಿಮ್ಮ ಸರ್ಕಾರಕ್ಕೆ ಬಿ.ಜೆ.ಪಿ. ಮತ್ತು ಕಾಂಗ್ರೆಸ್‌ನವರು ಬೆಂಬಲ ಕೊಡದಿದ್ದರೂ, ನಾವು ಪುಟ್ಟಣ್ಣಯ್ಯನವರು ಮತ್ತು ರೈತಸಂಘದವರು ಯಾವತ್ತೂ ನಿಮಗೆ ಬೆಂಬಲ ಕೊಟ್ಟಿದ್ದೇವೆ. ಆದ್ದರಿಂದ, ನಿಮಗೆ ಶುಭವಾಗಲಿ. ಮುಂದೆ ನೀವು ಹೀಗೆಯೇ ಇರಬೇಕೆಂಬುದು ನಮ್ಮ ಆಶಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಪವರ್ ಆಫ್ ಅಟಾರ್ನಿ ತೆಗೆದುಕೊಂಡಿದ್ದರೂ ಅದರ ಮೇಲೆ ಮೊನ್ನೆ ಸ್ಟಾಂಪ್ ಡ್ಯೂಟಿ ಹೆಚ್ಚಿಗೆ ಮಾಡಿದ್ದಾರೆ. ತಾವು, ಪುಟ್ಟಣ್ಣಯ್ಯನವರು ಮತ್ತು ಶ್ರೀರಾಮರೆಡ್ಡಿಯವರೇನೋ ಪವರ್ ಆಫ್ ಅಟಾರ್ನಿ ತೆಗೆದುಕೊಂಡಿರಿ. ಆದರೆ, ಆ ಪವರ್ ಆಫ್ ಅಟಾರ್ನಿಗೆ ಸ್ಟಾಂಪ್ ಡ್ಯೂಟಿ ಹೆಚ್ಚಿಗೆ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾವು ಶ್ರೀರಾಮರೆಡ್ಡಿಯವರು, ಕಮ್ಯುನಿಸ್ಟರು ಮತ್ತು ರೈತ ಸಂಘದವರು ಈ ಸರ್ಕಾರ ಸುಭದ್ರವಾಗಿರಬೇಕೆಂದು ಬಹಿರಂಗವಾಗಿ ಸಂಪೂರ್ಣವಾದ ಬೆಂಬಲವನ್ನು

ಕೊಟ್ಟಿದ್ದೇವೆ. ಆದ್ದರಿಂದ ಈ ಸರ್ಕಾರ ಸುಭದ್ರವಾಗಿರಲಿ. ಮುಂದಿನ ಯುಗಾದಿಗೂ ತಾವೇ ಮುಖ್ಯಮಂತ್ರಿಗಳಾಗಿರಬೇಕೆಂದು ಶುಭವನ್ನು ಹಾರೈಸುತ್ತೇವೆ.

ಅಧ್ಯಕ್ಷರು : ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಶಾಸನ ಸಭೆ ಈ ರಾಜ್ಯದ ಇಡೀ ಜನರ ಆಶೋತ್ತರಗಳನ್ನು ಪ್ರತಿಬಿಂಬಿಸತಕ್ಕ ಅಧಿಕೃತ ಸಭೆಯಾಗುತ್ತದೆ. ಜನಪ್ರತಿನಿಧಿಗಳಾಗಿ ಇಲ್ಲಿ ಕಾರ್ಯನಿರ್ವಹಿಸತಕ್ಕ ಸಂದರ್ಭದಲ್ಲಿ ಜನರ ಹಿತವನ್ನು ಪ್ರಮುಖವಾಗಿ ಮನಸ್ಸಿನಲ್ಲಿಟ್ಟು ಕೊಂಡಿರುತ್ತಾರೆ. ಮಾನ್ಯ ಸಭಾನಾಯಕರು, ಪ್ರತಿಪಕ್ಷದ ನಾಯಕರು ಮತ್ತೆ ಸುರೇಶ್ ಕುಮಾರ್‌ರವರು ಮತ್ತು ವಾಟಾಳ್‌ರವರು ಹೇಳಿದಂತೆ ಈ ಸನ್ನಿವೇಶದಲ್ಲಿ, ಈ ವರ್ಷ ಕಳೆದು ಹೊಸ ವರ್ಷಕ್ಕೆ ಕಾಲಿಡುತ್ತಿದ್ದೇವೆ. ಈ ಅಧಿಕೃತ ಸಭೆ ಏನಿದೆ, ಜನಪ್ರತಿನಿಧಿಗಳ ಸಭೆ ರಾಜ್ಯದ ಜನರಿಗೆ ಹೊಸ ವರ್ಷದ ಶುಭಾಶಯಗಳನ್ನು ತಲುಪಿಸುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿ, ಈ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದಕ್ಕೆ ಹಾಕಿದ್ದೇನೆ. ಸಹಕಾರಕ್ಕಾಗಿ ತಮಗೆಲ್ಲರಿಗೂ ವಂದನೆಗಳು.

(ಸದನವು ಸಂಜೆ 7 ಗಂಟೆ 12 ನಿಮಿಷಕ್ಕೆ ಅನಿರ್ದಿಷ್ಟ ಕಾಲದ ವರೆಗೆ ಮುಂದೂಡಲ್ಪಟ್ಟಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)